ಕೊಟ್ಟದ್ದರ ಬಗ್ಗೆ ವಿಶ್ವಾಸ, ಪಡೆದದ್ದರ ಬಗ್ಗೆ ಕೃತಜ್ಞತೆ – ಇವು ಬದುಕು ಮತ್ತು ಸಂಬಂಧಗಳನ್ನು ಉದಾತ್ತಗೊಳಿಸುತ್ತಾ ಹೋಗುತ್ತವೆ. ಇದಕ್ಕೆ ಸಹಜೀವಿಗಳ ಬಗ್ಗೆ ಅನುಭೂತಿಯೊಂದು ಬೇಕು. ಇದೊಂದು ಅಸಾಧ್ಯವಾದ, ಆದರ್ಶದ ಮನಃಸ್ಥಿತಿಯೆಂದೇ ನಂಬಲಾಗುತ್ತದೆ. ಆದರೆ, ಇದು ಬದುಕನ್ನು ಅದರ ಅಪರಿಹಾರ್ಯ ಸಂಗತಿಗಳ ಜೊತೆಯಲ್ಲಿ, ನೆರಳಿನಂತಿರುವ ಏಕಾಂತದ ಜೊತೆಯಲ್ಲಿ ಪ್ರೀತಿಸಬಹುದಾದ ಅತ್ಯುತ್ತಮ ದಾರಿ ಎಂದು ಮುಕ್ತಾಯಕ್ಕ ನಂಬಿದ್ದಾರೆ.

.........................

ನಮ್ಮ ಕೊನೆಯ ಅಪ್ಪುಗೆ,/ ಮತ್ತೆ ಹಣೆಯ ಮೇಲೊಂದು/ ಹೂ ಮುತ್ತು!

ವಿದಾಯಕ್ಕೂ ಒಂದು ಘನತೆಯಿದೆ, ಪ್ರೀತಿಯಷ್ಟೇ ಗೌರವದಿಂದ ಅದನ್ನು ಕಾಣಬೇಕು. ನಿಜ ಇದು ಅಸಾಧ್ಯ, ಅಸಾಧು ಎನ್ನುವಂತೆ ಭಾಸವಾಗುತ್ತದೆ. ಆದರೆ, ಎಲ್ಲಕ್ಕಿಂತ ಬದುಕು ದೊಡ್ಡದೆನ್ನುವುದಾದರೆ, ಅದನ್ನು ಅದರ ಮಿತಿ–ದೌರ್ಬಲ್ಯಗಳಿಂದ ಮುಕ್ತಗೊಳಿಸಿ ನೋಡುವುದು ಸಾಧ್ಯವಿಲ್ಲ. ಬದುಕಿನ ಪ್ರೀತಿಯೊಂದಿಗೇ ಇವುಗಳನ್ನೂ ನಿಭಾಯಿಸಲು ಅಸಾಧಾರಣ ಮನಃಸ್ಥಿತಿಯೇ ಬೇಕು. ಅದನ್ನು ಕಟ್ಟಿಕೊಳ್ಳಲು ಇರುವ ಬಹುದೊಡ್ಡ ಮಾದರಿ ನಮ್ಮೆದುರಿಗಿನ ಅನಂತ ಪ್ರಕೃತಿ. ಅದರ ಜೊತೆ ಆತ್ಮಸಖ್ಯವೊಂದನ್ನು ನಿಧಾನವಾಗಿ, ಏಳುಬೀಳುಗಳ ಜೊತೆ, ಸ್ನೇಹ ಜಗಳಗಳ ಜೊತೆ ಕಟ್ಟಿಕೊಳ್ಳುತ್ತಾ ಹೋಗುವ ಪ್ರಕ್ರಿಯೆಯೊಂದು ಇಡೀ ಕವನ ಸಂಕಲನದ ಮೂಲಭಿತ್ತಿಯನ್ನು ರೂಪಿಸಿದೆ. ಇಷ್ಟಕ್ಕೂ ಆ ಸಂಬಂಧವೋ ಆ ಸಂದರ್ಭವೋ ತಾನು ಕೊಡಬೇಕಾದ್ದನ್ನು ಕೊಟ್ಟಿದೆ ಎನ್ನುವುದಾದರೆ ಅದರ ಬಗ್ಗೆ ಆಕ್ಷೇಪವಾದರೂ ಏಕೆ ಎನ್ನುವ ಭಾವವೂ ಅಲ್ಲಲ್ಲಿ ಸುಳಿಯುತ್ತದೆ.

ಸಂಬಂಧಗಳ ಒಡಲಲ್ಲೇ ಅದರ ಜೊತೆಗಿನ ಮನಸ್ತಾಪವೋ, ನಮ್ಮದೇ ಆದ ಇರಾದೆಗಳೋ ಇದ್ದೇ ಇರುತ್ತವೆ. ಪ್ರಶ್ನೆಯಿರುವುದು ಅದನ್ನು ಪರಸ್ಪರರು ಒಪ್ಪಿ ಗೌರವಿಸುವಲ್ಲಿ.

'ನಾನು ಒಂದು ಕ್ಷಣವೂ/ ನಿನ್ನ ಬಿಟ್ಟಿರಲಾರೆ'/ ನೀನು ನನ್ನ ಕೊರಳ ಸುತ್ತ/ ಕೈ ಹಾಕುತ್ತಾ ಹೇಳಿದೆ/ ನಿನ್ನ ಕಂಗಳು ವಿಚಿತ್ರವಾಗಿ ಹೊಳೆಯುತ್ತಿದ್ದವು/ ನಾನೊಂದು ಕ್ಷಣ ಮೌನವಾದೆ,/ ನನ್ನ ಏಕಾಂತವನು,/ ಕರೆಯುತ್ತ ಹೇಳಿದೆ,/ 'ನಾನು ಸ್ವಚ್ಛ ಆಗಸ, ಬೆಟ್ಟ,/ ಸಮುದ್ರವಿಲ್ಲದೆ ಬದುಕಲಾರೆ'/ ನಾವು ಕೈ ಕೈ ಹಿಡಿದು,/ ಮೋಡಗಳೇರಿ ಹೊರಟೆವು/ ನಗು ನಗುತ

ಇದೊಂದು ಅತ್ಯುತ್ತಮ ಕವಿತೆ ಮಾತ್ರವಲ್ಲ, ಅತ್ಯಂತ ಮುಖ್ಯವಾದ ಕವಿತೆಯೂ ಹೌದು. ಏಕಾಂತದ ನಮ್ಮ ಸಾಮಾನ್ಯ ಪರಿಕಲ್ಪನೆಗಳನ್ನು ಒಡೆದುಹಾಕಿ ಸತ್ಯದೊಂದಿಗೆ ನಮ್ಮನ್ನು ಮುಖಾಮುಖಿಯಾಗಿಸುತ್ತದೆ. ಏನೆಂಥ ಸಖ್ಯದಲ್ಲೂ ಮನುಷ್ಯರಲ್ಲಿ ಉಳಿದೇ ಉಳಿಯುವ ಏಕಾಂತವನ್ನು ಮಾತ್ರವಲ್ಲ, ಅದು ಬೇಕು, ಅದು ಅಗತ್ಯ ಎನ್ನುವುದನ್ನೂ ಇದು ಹೇಳುತ್ತಿದೆ. ಹೀಗಿದ್ದೂ ಆ ಸ್ನೇಹ ಉಳಿಯಬೇಕು ಎನ್ನುವುದಾದರೆ, ಪ್ರಕೃತಿಯ ರೂಪಕಗಳನ್ನು ನೋಡಬೇಕು ಎಂದು ಈ ಕವಿತೆ ಒತ್ತಾಯಿಸುತ್ತದೆ. ಸ್ವಚ್ಛ ಆಗಸ, ಬೆಟ್ಟ, ಸಮುದ್ರಗಳು ಒಂದಾಗಿಯೂ ಇವೆ, ತಮ್ಮಷ್ಟಕ್ಕೆ ತಾವೂ ಇವೆ. ಇದು ಒಂದು ಇನ್ನೊಂದನ್ನು ಆವಾಹಿಸಿಕೊಳ್ಳುತ್ತಲೇ, ಅಖಂಡವಾಗಿ ಪ್ರೀತಿಸುತ್ತಲೇ ತನ್ನ ಅಸ್ತಿತ್ವವನ್ನು ಕಾಪಿಟ್ಟುಕೊಳ್ಳುವ ಪರಿ. ಮುಂದಿನ ಬಿಕ್ಕಟ್ಟುಗಳನ್ನೋ ಸಾಂಗತ್ಯವನ್ನೋ ಸ್ವೀಕರಿಸುತ್ತಲೇ ಬದುಕನ್ನು